# ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ
# ನ್ಯಾಯಾಲಯ ಮಾಗಡಿ
# ಕ್ರಿಮಿನಲ್ ಪ್ರಕರಣ ಸಂಖ್ಯೆ :3413/2021

ಪಿರ್ಯಾದುದಾರರು : ಕುದೂರು ಪೋಲಿಸ್ ಠಾಣೆ

**ವಿರುದ್ಧ**

**ಆರೋಪಿ : ಶಿವಕುಮಾರ್**

**ಚಾಸಾ : 14** / ಪ್ರಾಸಾ: 04

| | |
|---|---|
| ಹೆಸರು | **ಎ.ಪಿ ಕುಮಾರ್** |
| ತಂದೆಯ ಹೆಸರು | **ಪುಟ್ಟಸೋಮಾಚಾರ್** |
| ವಯಸ್ಸು | **52** |
| ಉದ್ಯೋಗ | **ಪಿ.ಐ ಬಿ.ಡಿ.ಎ** |
| ವಿಳಾಸ | **ಬೆಂಗಳೂರು** |

**ದಿನಾಂಕಃ 04.12.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** :- **ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** :-

ನಾನು ದಿಃ 05.04.2021 ರಿಂದ ದಿಃ03.06.2021 ರವರೆಗೆ ಮಾಗಡಿ ಸಿ.ಪಿ.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಂತರ ದಿಃ 03.06.2021 ರಿಂದ ದಿಃ03.10.2023 ರವರೆಗೆ ಪಿ.ಐ ಆಗಿ ಕುದೂರು ಪೋಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ25.04.2021 ರಂದು ಕೇಸಿನ ಕಡತವನ್ನು ಚಾಸಾ-13 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರಿಸಿರುತ್ತೇನೆ. ಅದೇ ದಿನ ಸದರಿ ಪ್ರಕರಣದಲ್ಲಿ ಟಾಟಾ ಎಸ್ ನಂ.ಕೆಎ-02-ಎ ಹೆಚ್-0319 ವಾಹನ ಮಾಲೀಕರಾದ ಚಾಸಾ-11ರವರಿಗೆ ಕಲಂ 133 ರ ಐ.ಎಂ.ವಿ ರೀತ್ಯಾ ಪೋಲೀಸ್ ನೋಟೀಸ್ ಜಾರಿ ಮಾಡಿರುತ್ತೇನೆ.

ಸಾಕ್ಷಿಯು 133 ರ ಐ.ಎಂ.ವಿ ರೀತ್ಯಾ ಪೋಲೀಸ್ ನೋಟೀಸ್ ನ್ನು ನೋಡಿ ಗುರುತಿಸಿದ್ದು, 133 ರ ಐ.ಎಂ.ವಿ ರೀತ್ಯಾ ಪೋಲೀಸ್ ನೋಟೀಸ್ ನ್ನು ನಿಪಿ-08 ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ನಂತರ ದಿಃ25.02.2021 ರಂದು ಸದರಿ ಪ್ರಕರಣದಲ್ಲಿ ಆರೋಪಿ ವಾಹನದ ಮಾಲೀಕರಾದ ಚಾಸಾ-11ರವರು ಠಾಣೆಗೆ ಹಾಜರಾಗಿ ಕಲಂ 133 ರ ಐ.ಎಂ.ವಿ ರೀತ್ಯಾ ಪೋಲೀಸ್ ನೋಟೀಸ್ ಗೆ ಪ್ರತ್ಯೂತ್ತರ ನೋಟೀಸ್ ನ್ನು ನೀಡಿ ದಾಖಲಾತಿಗಳನ್ನು ನೀಡಿರುತ್ತಾರೆ. ಸಾಕ್ಷಿಯು ಪ್ರತ್ಯೂತ್ತರ ನೋಟೀಸ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-09 ಎಂದು ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಪ್ರತ್ಯೂತ್ತರ ನೋಟೀಸ್ ನ್ನು ಪಡೆದು ದಾಖಲಾತಿಗಳನ್ನು ಪರಿಶೀಲನೆ ಮಾಡಿ ಚಾಸಾ-11 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.ದಿಃ17.06.2021 ರಂದು ಆರೋಪಿ ಚಾಲಕ ಶಿವಕುಮಾರ್ ರವರು ಠಾಣೆಗೆ ಹಾಜರಾಗಿದ್ದು, ಆರೋಪಿಯ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ಹೇಳಿಕೆಯನ್ನು ಪರಿಶೀಲನೆ ಮಾಡಿದಾಗ ವಾಹನಕ್ಕೆ ಅಪಘಾತದ ವೇಳೆಗೆ ವಿಮೆ ಚಾಲ್ತಿಯಲ್ಲಿ ಇಲ್ಲದೇ ಇರುವುದು ತಿಳಿದು ಬಂದಿರುತ್ತದೆ.

ನಂತರ ದಿಃ21.06.2021ರಂದು ಸದರಿ ಪ್ರಕರಣದಲ್ಲಿ ಆರೋಪಿ ರವರು ಠಾಣೆಗೆ ಹಾಜರಾಗಿ ದಸ್ತಗಿರಿ ಕ್ರಮ ಅನುಸರಿಸಿ ಸೂಕ್ತ ಜಾಮೀನಿನ ಮೇರೆಗೆ ಬಿಡುಗಡೆ ಮಾಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯು ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು ಆರೋಪಿಯ ಗುರುತಿನ ಬಗ್ಗೆ ಅರೋಪಿಯ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ನುಡಿದಿರುತ್ತಾರೆ.

ನಂತರ ದಿಃ 02.07.2021 ರಂದು ಕಲಂ 65 ಬಿ ರೀತ್ಯಾ ಅಡಿಯಲ್ಲಿ ಹೆಚ್.ಸಿ. 407 ರವರಿಂದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಕಲಂ 65 ರೀತ್ಯಾ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-10 ರವರಿಂದ ಅರೋಪಿ ವಾಹನದ ಐ.ಎಂ. ವಿ ವರದಿಯನ್ನು ಪಡೆದುಕೊಂಡಿರುತ್ತೇನೆ.

ಸಾಕ್ಷಿಯು ಐ.ಎಂ. ವಿ ವರದಿಯನ್ನು ನೋಡಿ ಗುರುತಿಸಿದ್ದು, ಅದು ಈಗಾಗಲೇ ಒಪ್ಪಿಗೆಯ ಮೇರೆಗೆ ನಿಪಿ-07 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-07(ಎ) ಎಂದು ಗುರುತಿಸಲಾಯಿತು. ಅದೇ ದಿನ ಸದರಿ ಪ್ರಕರಣದಲ್ಲಿ ತನಿಖೆ ಪೂರ್ಣ ಗೊಳಿಸಿ ಆರೋಪಿಯ ವಿರುದ್ದ ಆರೋಪ ಸಾಬೀತಾದ ಕಾರಣ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಪಾಟೀ **ಸವಾಲು:- ಶ್ರೀಮತಿ. ಆರ್.ಟಿ.ಎಂ.** ವಕೀಲರಿಂದ **ಆರೋಪಿ** ಪರವಾಗಿ:--

ನೀವು ದಿಃ25.04.2021ರಂದು ಕೇಸಿನ ಕಡತವನ್ನು ಚಾಸಾ-13ರವರಿಂದ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಅದೇ ದಿನ ಚಾಸಾ-11 ರವರಿಗೆ ನೋಟೀಸ್ ನೀಡಿರುವುದು ಸಹ ಸುಳ್ಳು ಎಂದರೆ ಸರಿಯಲ್ಲ. ದಿಃ 22.05.2021ರಂದು ಚಾಸಾ-11 ರರಿಂದ ಪ್ರತ್ಯೂತ್ತರ ನೋಟೀಸ್ ಪಡೆದುಕೊಂಡಿರುವುದು ಸುಳ್ಳು ಎಂದರೆ ಸರಿಯಲ್ಲ. ಅದೇ ದಿನ ಚಾಸಾ-11ರವರ ಹೇಳಿಕೆ ಯನ್ನು ಪಡೆದುಕೊಂಡಿರುವುದು ಸುಳ್ಳು ಎಂದರೆ ಸರಿಯಲ್ಲ.

2. ದಿಃ17.06.2021ರಂದು ಆರೋಪಿಯ ಹೇಳಿಕೆಯನ್ನು ಪಡೆದುಕೊಂಡಿರುವುದು ಸುಳ್ಳು ಎಂದರೆ ಸರಿಯಲ್ಲ. ಅಪಘಾತವಾದಾಗ ವಿಮೆ ಚಾಲ್ತಿಯಲ್ಲಿ ಇಲ್ಲದೇ ಇರುವುದು ಸಹ ಸುಳ್ಳು ಎಂದರೆ ಸರಿಯಲ್ಲ . ದಿಃ21.06.2021ರಂದು ಆರೋಪಿಯ ವಿರುದ್ದ ದಸ್ತಗಿರಿ ಕ್ರಮ ಅನುಸರಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುವುದು ಸುಳ್ಳು ಎಂದರೆ ಸರಿಯಲ್ಲ. ದಿಃ 02.07.2021ರಂದು ನಾಗರಾಜ್ ರವರಿಂದ ಕಲಂ 65-ಬಿ ರೀತ್ಯಾ ಪ್ರಮಾಣ ಪತ್ರವನ್ನು ಪಡೆದುಕೊಂಡಿರುವುದು ಸಹ ಸುಳ್ಳು ಎಂದರೆ ಸರಿಯಲ್ಲ. ಹೆಚ್.ಸಿ ನಾಗರಾಜು ರವರನ್ನು ಈ ಕೇಸಿನಲ್ಲಿ ಸಾಕ್ಷಿ ದಾರರನ್ನಾಗಿ ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಚಾಸಾ-10 ರವರಿಂದ ಐ.ಎಂ.ವಿ ವರದಿಯನ್ನು ಪಡೆದುಕೊಂಡಿರುವುದು ಸಹ ಸುಳ್ಳು ಎಂದರೆ ಸರಿಯಲ್ಲ. ನಿಪಿ-10ರಲ್ಲಿ ಎಷ್ಟು ಗಂಟೆಗೆ

ಪೋಟೋಗಳನ್ನು ತೆಗೆದಿರುತ್ತಾರೆ ಎಂದು ನಮೂದು ಆಗಿಲ್ಲ ಎಂದರೆ ಸರಿ. ಮೃತರ ಕುಟುಂಬಕ್ಕೆ ಸಹಾಯವಾಗಲೆಂದು ಸುಳ್ಳು ಪ್ರಮಾಣ ಪತ್ರವನ್ನು ನಾಗರಾಜು ರವರಿಂದ ಪಡೆದುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿಯ ವಿರುದ್ದ ಯಾವುದೇ ಆರೋಪ ಸಾಬೀತಾಗದೇ ಇದ್ದರೂ ಸಹ ಮೃತರ ಕುಟುಂಬಕ್ಕೆ ಸಹಾಯವಾಗಲೆಂದು ಸುಳ್ಳು ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**